**All India Radio: Bangalore**
**National Bulletin In Kannada**
**18.05.2026 07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**18.05.2026 07.35 a.m.**
**<><><><>**

ಮುಖ್ಯಾಂಶಗಳು

1. ಭಾರತ-ಸ್ವೀಡನ್ ದ್ವಿಪಕ್ಷೀಯ ಸಂಬಂಧ, ಕಾರ್ಯತಂತ್ರದ ಪಾಲುದಾರಿಕೆಯಾಗಿ ಉನ್ನತೀಕರಣ : ಪ್ರಧಾನಿಯವರಿಗೆ ಸ್ವೀಡನ್‌ನ ಅತ್ಯುನ್ನತ ಗೌರವ
2. ೭೯ನೇ ವಿಶ್ವ ಆರೋಗ್ಯ ಸಭೆ ಜಿನಿವಾದಲ್ಲಿ ಇಂದಿನಿಂದ ಆರಂಭ ; ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಭಾಗಿ
3. ಯುಎಇ ಅಣುಸ್ಥಾವರದ ಮೇಲಿನ ದಾಳಿಗೆ ಭಾರತ ತೀವ್ರ ಕಳವಳ ; ರಾಜತಾಂತ್ರಿಕ ಮಾರ್ಗ ಅನುಸರಣೆಗೆ ಕರೆ
4. ಕೇರಳದ ನೂತನ ಮುಖ್ಯಮಂತ್ರಿಯಾಗಿ ಇಂದು ವಿ.ಡಿ.ಸತೀಶನ್ ಪ್ರಮಾಣವಚನ ಸ್ವೀಕಾರ
5. ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ; ೧೦ ಪದಕ ಮುಡಿಗೇರಿಸಿಕೊಂಡ ಭಾರತ

<><><><>

ಎರಡು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಸ್ವೀಡನ್‌ಗೆ ತೆರಳಿರುವ ಪ್ರಧಾನಿ ನರೇಂದ್ರ ಮೋದಿ ನಿನ್ನೆ ರಾತ್ರಿ ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಅವರೊಂದಿಗೆ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಉಭಯ ದೇಶಗಳ ಬಾಂಧವ್ಯ ವೃದ್ಧಿ ಹಾಗೂ ದೂರದೃಷ್ಟಿಯ ನಾಯಕತ್ವವನ್ನು ಶ್ಲಾಘಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ವೀಡನ್‌ನ ಅತ್ಯುನ್ನತ ಗೌರವವಾದ 'ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್, ಡಿಗ್ರಿ ಕಮಾಂಡರ್ ಗ್ರ್ಯಾಂಡ್ ಕ್ರಾಸ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಇದು ಪ್ರಧಾನಿಯವರಿಗೆ ಸಂದ ೩೧ನೇ ಅಂತರರಾಷ್ಟ್ರೀಯ ಗೌರವವಾಗಿದೆ. ಈ ಐತಿಹಾಸಿಕ ಭೇಟಿಯ ವೇಳೆ ಉಭಯ ನಾಯಕರು ಭಾರತ-ಸ್ವೀಡನ್ ನಡುವಿನ ಬಾಂಧವ್ಯವನ್ನು 'ಕಾರ್ಯತಂತ್ರದ ಪಾಲುದಾರಿಕೆ' ಮಟ್ಟಕ್ಕೆ ಕೊಂಡೊಯ್ಯಲು ಒಪ್ಪಂದ ಮಾಡಿಕೊಂಡಿದ್ದು, ವ್ಯಾಪಾರ, ಹೂಡಿಕೆ, ರಕ್ಷಣೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸಲು ನಿರ್ಧರಿಸಿದರು.ಮುಂದಿನ ಐದು ವರ್ಷಗಳಲ್ಲಿ ಉಭಯ ದೇಶಗಳ ನಡುವಿನ ಆರ್ಥಿಕ ವಿನಿಮಯವನ್ನು ದ್ವಿಗುಣಗೊಳಿಸುವ ಗುರಿಯೊಂದಿಗೆ '೨೦೨೬-೨೦೩೦ರ ಜಂಟಿ ಕ್ರಿಯಾ ಯೋಜನೆ' ಅನ್ನು ಅಳವಡಿಸಿಕೊಳ್ಳಲಾಯಿತು. ಸ್ವೀಡನ್‌ನ ಉದ್ಯಮ ಪ್ರಮುಖರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಭಾರತದ ಹಸಿರು ಜಲಜನಕ ಮತ್ತು 'ನಿರ್ಣಾಯಕ ಖನಿಜಗಳ ಮಿಷನ್' ಅಡಿಯಲ್ಲಿ ಹೂಡಿಕೆ ಮಾಡುವಂತೆ ಆಹ್ವಾನ ನೀಡಿದರು. ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಾಗಿ 'ಜಂಟಿ ಆವಿಷ್ಕಾರ ಪಾಲುದಾರಿಕೆ ೨.೦' ಅನ್ನು ಪ್ರಾರಂಭಿಸಲಾಯಿತು ಮತ್ತು ಎಐ, ೬-ಜಿ ಹಾಗೂ ಕ್ವಾಂಟಮ್ ಕಂಪ್ಯೂಟಿಂಗ್ ಕುರಿತು ಸಂಶೋಧನೆ ನಡೆಸಲು ಜಂಟಿ ವರ್ಚುವಲ್ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರವನ್ನು ಸ್ಥಾಪಿಸಲು ಸಮ್ಮತಿಸಲಾಯಿತು. ರಕ್ಷಣಾ

ಕ್ಷೇತ್ರದಲ್ಲಿ ಸ್ವೀಡನ್ ಕಂಪನಿಗಳು ಭಾರತದ ರಕ್ಷಣಾ ಉತ್ಪಾದನಾ ಕಾರಿಡಾರ್‌ಗಳಲ್ಲಿ ದೀರ್ಘಕಾಲೀನ ಹೂಡಿಕೆ ಮಾಡಲು ಮುಂದಾಗಿವೆ. ಇನ್ನು ಸಾಂಸ್ಕೃತಿಕ ಬಾಂಧವ್ಯದ ಭಾಗವಾಗಿ, ರವೀಂದ್ರನಾಥ ಟಾಗೋರ್ ಅವರು ಸ್ವೀಡನ್‌ಗೆ ಭೇಟಿ ನೀಡಿದ ಶತಮಾನೋತ್ಸವದ ನೆನಪಿಗಾಗಿ "ಟಾಗೋರ್-ಸ್ವೀಡನ್ ಉಪನ್ಯಾಸ ಸರಣಿ" ಯನ್ನು ಪ್ರಾರಂಭಿಸಿ, ಐತಿಹಾಸಿಕ ಹಸ್ತಪ್ರತಿಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯನ್ ಅವರ ಉಪಸ್ಥಿತಿಯಲ್ಲಿ ಭಾರತ-ಐರೋಪ್ಯ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಮತ್ತಷ್ಟು ವೇಗ ನೀಡಲಾಯಿತು.

<><><>

ತಮ್ಮ ಐದು ರಾಷ್ಟ್ರಗಳ ವಿದೇಶಿ ಪ್ರವಾಸದ ನಾಲ್ಕು ಚರಣದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಇಂದು ನಾರ್ವೆಗೆ ಭೇಟಿ ನೀಡಲಿದ್ದಾರೆ. ಇದು ಪ್ರಧಾನಿ ಮೋದಿಯವರ ಮೊದಲ ನಾರ್ವೆ ಪ್ರವಾಸವಾಗಿದ್ದು, ಕಳೆದ ೪೩ ವರ್ಷಗಳಲ್ಲಿ ಭಾರತದ ಪ್ರಧಾನಿಯೊಬ್ಬರು ಆ ದೇಶಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಿದೆ. ಈ ಪ್ರವಾಸದ ಅವಧಿಯಲ್ಲಿ ಪ್ರಧಾನಿಯವರು ಅಲ್ಲಿನ ರಾಜ ಐದನೇ ಹರಾಲ್ಡ್ ಮತ್ತು ರಾಣಿ ಸೋಂಜಾ ಅವರನ್ನು ಭೇಟಿಯಾಗಲಿದ್ದಾರೆ ಹಾಗೂ ನಾರ್ವೆ ಪ್ರಧಾನಿ ಜೊನಾಸ್ ಗಹರ್ ಸ್ಟೋರ್ ಅವರೊಂದಿಗೆ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಇದರ ಜೊತೆಗೆ ಉಭಯ ದೇಶಗಳ ಪ್ರಧಾನಿಗಳು ಜಂಟಿಯಾಗಿ 'ಭಾರತ-ನಾರ್ವೆ ಉದ್ಯಮ ಮತ್ತು ಸಂಶೋಧನಾ ಶೃಂಗಸಭೆ'ಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಾಳೆ '೩ನೇ ಭಾರತ-ನಾರ್ಡಿಕ್ ಶೃಂಗಸಭೆ' ಜರುಗಲಿದ್ದು, ಇದರಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ನಾರ್ವೆ ಪ್ರಧಾನಿ ಜೊನಾಸ್ ಗಹರ್ ಸ್ಟೋರ್, ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸೆನ್, ಫಿನ್ಲ್ಯಾಂಡ್ ಪ್ರಧಾನಿ ಪೆಟ್ಟೇರಿ ಒರ್ಪೋ, ಐಸ್ಲ್ಯಾಂಡ್ ಪ್ರಧಾನಿ ಕ್ರಿಸ್ಟ್ರೂನ್ ಫ್ರೋಸ್ಟಡೋಟ್ಟಿರ್ ಮತ್ತು ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಭಾಗವಹಿಸಲಿದ್ದಾರೆ. ಈ ಉನ್ನತ ಮಟ್ಟದ ಶೃಂಗಸಭೆಯು ತಂತ್ರಜ್ಞಾನ, ಆವಿಷ್ಕಾರ, ಹಸಿರು ಇಂಧನ ಪರಿವರ್ತನೆ, ಸುಸ್ಥಿರ ಅಭಿವೃದ್ಧಿ, ರಕ್ಷಣೆ, ಬಾಹ್ಯಾಕಾಶ ಮತ್ತು ಆರ್ಕ್ಟಿಕ್ ಸಂಶೋಧನಾ ವಲಯಗಳಲ್ಲಿ ಭಾರತ ಹಾಗೂ ನಾರ್ಡಿಕ್ ರಾಷ್ಟ್ರಗಳ ನಡುವಿನ ಬಾಂಧವ್ಯಕ್ಕೆ ಕಾರ್ಯತಂತ್ರದ ಹೊಸ ಆಯಾಮವನ್ನು ನೀಡಲಿದೆ.

<><><>

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜಗತ್ ಪ್ರಕಾಶ್ ನಡ್ಡಾ ಅವರು ೭೮ನೇ ವಿಶ್ವ ಆರೋಗ್ಯ ಸಭೆಯಲ್ಲಿ ಭಾಗವಹಿಸಲು ಸ್ವಿಟ್ಜರ್‌ಲ್ಯಾಂಡ್‌ಗೆ ತೆರಳಿದ್ದಾರೆ. ೬ ದಿನಗಳ ಈ ಕಾರ್ಯಕ್ರಮ ಇಂದು ಜಿನೀವಾದಲ್ಲಿ ಆರಂಭವಾಗಲಿದೆ. ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಈ ವರ್ಷದ ಘೋಷವಾಕ್ಯ - 'ಜಾಗತಿಕ ಆರೋಗ್ಯವನ್ನು ಮರು ರೂಪಿಸುವುದು: ಹಂಚಿಕೆಯ ಜವಾಬ್ದಾರಿ, ಜಾಗತಿಕ ಆರೋಗ್ಯ ಸವಾಲುಗಳನ್ನು ಎದುರಿಸುವಲ್ಲಿ ಸಾಮೂಹಿಕ ಕ್ರಮದ ಮಹತ್ವ' ಎಂಬುದಾಗಿದೆ ಎಂದು ತಿಳಿಸಿದ್ದಾರೆ. ಈ ಸಭೆಯಲ್ಲಿ ೧೬೫ಕ್ಕೂ ಹೆಚ್ಚು ದೇಶಗಳ ಆರೋಗ್ಯ ಸಚಿವರು, ಗಣ್ಯರು ಮತ್ತು ಸಾರ್ವಜನಿಕ ಆರೋಗ್ಯ ತಜ್ಞರು ಪಾಲ್ಗೊಳ್ಳಲಿದ್ದು, ಈ ಸಭೆ ಹೆಚ್ಚು ಸಮಗ್ರ ಮತ್ತು ಸುಸ್ಥಿರ ಆರೋಗ್ಯ ವ್ಯವಸ್ಥೆಗಳನ್ನು ನಿರ್ಮಿಸುವೆಡೆಗೆ ಹಂಚಿಕೆಯ ಜಾಗತಿಕ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಸಚಿವರು ಹೇಳಿದ್ದಾರೆ.

<><><><>

ಯುಎಇ ಯ ಬರಾಕಾ ಪರಮಾಣು ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿಕೊಂಡು ನಡೆಸಿರುವ ದಾಳಿಯ ಕುರಿತು ಭಾರತ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಈ ಕುರಿತು ಹೇಳಿಕೆ ಬಿಡುಗಡೆಗೊಳಿಸಿರುವ ವಿದೇಶಾಂಗ ಸಚಿವಾಲಯ ಇಂತಹ ಪ್ರಚೋಧನಾತ್ಮಕ ಕ್ರಮಗಳು ಸ್ವೀಕಾರಾರ್ಹವಲ್ಲ. ಇವು ಪ್ರಾದೇಶಿಕ ಪರಿಸ್ಥಿತಿಯನ್ನು ಮತ್ತಷ್ಟು ಅಪಾಯಕಾರಿಗೊಳಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದು, ಮಾತುಕತೆ ಹಾಗೂ ರಾಜೀ ತಾಂತ್ರಿಕ ಮಾರ್ಗಗಳನ್ನು ಅನುಸರಿಸುವಂತೆ ಕರೆ ನೀಡಿದೆ.

<><><><>

ಕಾಂಗ್ರೆಸ್ ನಾಯಕ ವಿ. ಡಿ. ಸತೀಶನ್ ಅವರು ಇಂದು ಕೇರಳದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೂ ಮುನ್ನ, ನಿಯೋಜಿತ ಮುಖ್ಯಮಂತ್ರಿಗಳು ನಿನ್ನೆ ಸಂಜೆ ೨೧ ಸದಸ್ಯರ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ ಯುಡಿಎಫ್ ಸಚಿವ ಸಂಪುಟದ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ. ಈ ಬಾರಿಯ ಸಂಪುಟದ ಒಟ್ಟು ೨೧ ಸಚಿವರ ಪೈಕಿ ಮುಖ್ಯಮಂತ್ರಿ ಸತೀಶನ್ ಒಳಗೊಂಡಂತೆ ೧೪ ಮಂದಿ ಪ್ರಥಮ ಬಾರಿಗೆ ಸಚಿವರಾಗುತ್ತಿರುವವರಿಗೆ ಅವಕಾಶ ಕಲ್ಪಿಸಿರುವುದು ವಿಶೇಷವಾಗಿದೆ. ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅಧಿಕಾರ ಮತ್ತು ಪ್ರಮಾಣವಚನ ಬೋಧಿಸಲಿದ್ದಾರೆ. ನೂತನ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಹುದ್ದೆ ಸೇರಿದಂತೆ ಕಾಂಗ್ರೆಸ್ ಪಕ್ಷವು ಒಟ್ಟು ೧೨ ಸ್ಥಾನಗಳನ್ನು ತನ್ನದಾಗಿಸಿಕೊಂಡಿದ್ದರೆ, ಪ್ರಮುಖ ಮೈತ್ರಿಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಪಕ್ಷಕ್ಕೆ ೫, ಕೇರಳ ಕಾಂಗ್ರೆಸ್ (ಜೋಸೆಫ್ ಬಣ), ರೆವಲ್ಯೂಷನರಿ ಸೋಷಿಯಲಿಸ್ಟ್ ಪಾರ್ಟಿ, ಕೇರಳ ಕಾಂಗ್ರೆಸ್ (ಜಾಕೋಬ್ ಬಣ) ಮತ್ತು ಕಮ್ಯುನಿಸ್ಟ್ ಮಾರ್ಕ್ಸಿಸ್ಟ್ ಪಾರ್ಟಿ ಪಕ್ಷಗಳಿಗೆ ತಲಾ ಒಂದು ಸಚಿವ ಸ್ಥಾನವನ್ನು ಹಂಚಿಕೆ ಮಾಡಲಾಗಿದೆ. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಕೇರಳ ಮುಂಖ್ಯಮಂತ್ರಿ ಪ್ರಮಾಣವಚನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎರಡು ದಿನಗಳ ಛತ್ತೀಸ್‌ಗಢ ಭೇಟಿಗಾಗಿ ನಿನ್ನೆ ಸಂಜೆ ರಾಯ್‌ಪುರಕ್ಕೆ ತೆರಳಿದರು. ಛತ್ತೀಸ್‌ಗಢ ಭೇಟಿ ಸಂದರ್ಭದಲ್ಲಿ ಅವರು ಬಸ್ತಾರ್‌ನಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಇಂದು ಬೆಳಗ್ಗೆ ರಾಯ್‌ಪುರದಲ್ಲಿ ತುರ್ತು ಪ್ರತಿಕ್ರಿಯೆ ಸೇವೆ ಡಯಲ್ -೧೧೨ ಅಡಿಯಲ್ಲಿ ಹೊಸ ವಾಹನಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ. ನಂತರ, ಅವರು ಬಸ್ತಾರ್‌ಗೆ ಪ್ರಯಾಣಿಸಿ ಜಿಲ್ಲೆಯ ನೇತನಾರ್ ಗ್ರಾಮದಲ್ಲಿ ಸಾರ್ವಜನಿಕ ಅನುಕೂಲ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ನಂತರ ಸಚಿವರು ಜಗದಲ್‌ಪುರವನ್ನು ತಲುಪಿ ಅಮರ್ ವಾಟಿಕಾದಲ್ಲಿ ಹುತಾತ್ಮರಿಗೆ ಗೌರವ ಸಲ್ಲಿಸಲಿದ್ದಾರೆ. ಮಧ್ಯಾಹ್ನ ಜಗದಲ್‌ಪುರದ ಬಾದಲ್ ಅಕಾಡೆಮಿಯಲ್ಲಿ ಹುತಾತ್ಮರ ಕುಟುಂಬಗಳು, ಭದ್ರತಾ ಸಿಬ್ಬಂದಿ, ನಕ್ಸಲ್ ಹಿಂಸಾಚಾರದಿಂದ ಪೀಡಿತ ಜನರು ಮತ್ತು ವಿವಿಧ ಸ್ಥಳೀಯ ಸಮುದಾಯಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಮೇ ೧೯ ರಂದು, ಕೇಂದ್ರ ಗೃಹ ಸಚಿವರು ಜಗದಲ್ಪುರದಲ್ಲಿ ಕೇಂದ್ರ ವಲಯ ಮಂಡಳಿಯ ೨೬ನೇ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ..

ಛತ್ತೀಸ್‌ಗಢವನ್ನು ನಕ್ಸಲ್ ಮುಕ್ತ ಎಂದು ಘೋಷಿಸಿದ ನಂತರ ಸಚಿವ ಅಮಿತ್ ಶಾ ಅವರ ಮೊದಲ ರಾಜ್ಯ ಭೇಟಿ ಇದಾಗಿದೆ.

<><><><>

ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕಳೆದ ಮೇ ೧೦ ರಂದು ನಡೆದ ಸಂಪುಟ ವಿಸ್ತರಣೆಯಲ್ಲಿ ನೂತನವಾಗಿ ಸೇರ್ಪಡೆಗೊಂಡ ಹಾಗೂ ಬಡ್ತಿ ಪಡೆದ ಸಚಿವರಿಗೆ ಇಲಾಖೆಗಳನ್ನು ಹಂಚಿಕೆ ಮಾಡಿದ್ದಾರೆ. ನೂತನ ಸಂಪುಟ ಸಚಿವರ ಪೈಕಿ ಬಿಜೆಪಿ ಮಾಜಿ ರಾಜ್ಯ ಅಧ್ಯಕ್ಷ ಭೂಪೇಂದ್ರ ಚೌಧರಿ ಅವರಿಗೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮ ಇಲಾಖೆ ಹಾಗೂ ಸಮಾಜವಾದಿ ಪಕ್ಷದಿಂದ ಬಂದಿದ್ದ ಮನೋಜ್ ಕುಮಾರ್ ಪಾಂಡೆ ಅವರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯನ್ನು ವಹಿಸಲಾಗಿದೆ. ಬಡ್ತಿ ಪಡೆದ ರಾಜ್ಯ ಸಚಿವರಾದ ಅಜಿತ್ ಪಾಲ್ ಸಿಂಗ್ ಅವರಿಗೆ ಆಹಾರ ಸುರಕ್ಷತೆ ಮತ್ತು ರಾಜಕೀಯ ವಿಶ್ರಾಂತಿ ವೇತನ ಹಾಗೂ ಸೋಮೇಂದ್ರ ತೋಮರ್ ಅವರಿಗೆ ಸೈನಿಕ ಕಲ್ಯಾಣ ಇಲಾಖೆಯನ್ನು ನೀಡಲಾಗಿದೆ.

<><><><>

ಗಾಂಧಿನಗರದಲ್ಲಿ ನಡೆದ ೨೦೨೬ರ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವು ಒಂದು ಬೆಳ್ಳಿ ಮತ್ತು ಒಂಬತ್ತು ಕಂಚು ಸೇರಿದಂತೆ ೧೦ ಪದಕಗಳನ್ನು ತನ್ನ ಮುಡಿಗೇರಿಸಿಕೊಂಡಿತು. ಇದು ಜಿಯಾಂಗ್‌ಶಾನ್‌ನಲ್ಲಿ ನಡೆದ ಹಿಂದಿನ ಆವೃತ್ತಿಗಿಂತ ದೊಡ್ಡ ಸುಧಾರಣೆಯಾಗಿದೆ, ಅಲ್ಲಿ ಭಾರತ ಪದಕವಿಲ್ಲದೆ ಹಿಂತಿರುಗಿತ್ತು. ಕಾಮನ್‌ವೆಲ್ತ್ ಕ್ರೀಡಾಕೂಟದ ಕಂಚಿನ ಪದಕ ವಿಜೇತ ಲವ್‌ಪ್ರೀತ್ ಸಿಂಗ್ ಅಂತಿಮ ದಿನದಂದು ಪುರುಷರ ೧೧೦ ಕೆಜಿಗೂ ಹೆಚ್ಚಿನ ತೂಕದ ವಿಭಾಗದಲ್ಲಿ ಐದನೇ ಸ್ಥಾನ ಪಡೆಯುವ ಮೂಲಕ ಭಾರತದ ಅತ್ಯುತ್ತಮ ಪ್ರದರ್ಶನ ನೀಡಿದರು. ಮಹಿಳೆಯರ ೫೩ ಕೆಜಿ ಸ್ನ್ಯಾಚ್ ಸ್ಪರ್ಧೆಯಲ್ಲಿ ಜ್ಞಾನೇಶ್ವರಿ ಯಾದವ್ ಬೆಳ್ಳಿ ಪದಕ ಗೆದ್ದರು. ಕೋಮಲ್ ಕೊಹರ್ ಮಹಿಳೆಯರ ೪೮ ಕೆಜಿ ವಿಭಾಗದಲ್ಲಿ ಕಂಚಿನ ಪದಕಗಳೊಂದಿಗೆ ಭಾರತದ ಪದಕ ಖಾತೆಯನ್ನು ತೆರೆದರು. ಪುರುಷರ ೭೧ ಕೆಜಿ ವಿಭಾಗದಲ್ಲಿ ಅಜಿತ್ ನಾರಾಯಣ ಎರಡು ಕಂಚಿನ ಪದಕಗಳನ್ನು ಗೆದ್ದರೆ, ಮಹಿಳೆಯರ ೬೯ ಕೆಜಿ ಸ್ನ್ಯಾಚ್ ಸ್ಪರ್ಧೆಯಲ್ಲಿ ಹರ್ಜಿಂದರ್ ಕೌರ್ ಕಂಚಿನ ಪದಕ ಗೆದ್ದರು. ಮಹಿಳೆಯರ ೭೭ ಕೆಜಿ ವಿಭಾಗದಲ್ಲಿ ಸಂಜನಾ ಮೂರು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>